‘ರೇಪ್ ಅಂತೆ’ ಆ ರಾತ್ರಿ ವರಾಂಡದಲ್ಲಿ ಮಲಗಿ ನಾನು ಖಾಲಿ ಬಾಂದಳದ ಹೊಳಪು ನಕ್ಷತ್ರವನ್ನು ವೀಕ್ಷಿಸುತ್ತಲೇ ಇದ್ದೆ. ಆಗಾಗ್ಗೆ ಕಚ್ಚುತ್ತಿದ್ದ ನುಸಿ ಸೊಳ್ಳೆಗಳು ನಿದ್ರೆಯ ಏಕಾಗ್ರತೆಯನ್ನು ಕೆಡಿಸುತ್ತಲೇ ಇದ್ದವು. ನಾನು ಎದ್ದು ಕುಳಿತು ಕಿಸೆಯಿಂದ ಒಡೊಮಾಸ್ ಮುಲಾಮು ಹಚ್ಚಿ ಮಲಗಿಕೊಂಡೆ. ಕಿವಿಯ ಬಳಿ ಸೊಳ್ಳೆ ಗುಂಯ್ ಕೇಳುತ್ತಲೇ ಇತ್ತು. ನನಗೆ ಅರೆ ಮಂಪರಿನಲ್ಲಿ ಮಗ ಎಚ್ಚರವಾಗಿ ಎಲ್ಲಾ ವೈರುಗಳನ್ನು ಕಿತ್ತು ಅತ್ತಂತೆ ಕೇಳಿ ಎಚ್ಚರಗೊಂಡು ಭ್ರಮನಿರಸನಗೊಂಡು ಮತ್ತೆ ಮಲಗಿದೆ. ಒಂದೆರಡು ಬಾರಿ ಹೀಗೆಯೇ ಪುನರಾವರ್ತನೆ ಗೊಂಡು ಸಣ್ಣ ಮಂಪರೊಂದು ಕವಿಯಿತು.

‘ಏಯ್ ಎದ್ದೇಳಿ... ಆ ಮಗುವಿಗೆ ಅರ್ಜಂಟ್ ಬ್ಲಡ್ ಬೇಕಂತೆ’

ನಾನು ದಡಬಡಿಸಿ ಎಚ್ಚೆತ್ತೆ.

‘ಏನಾಯಿತು?’

‘ಏನಿಲ್ಲ, ಆ ಹೆಣ್ಣು ಮಗು ಇತ್ತಲ್ವಾ ಅವ್ರಿಗೆ ಅರ್ಜಂಟು ಬ್ಲಡ್ ಬೇಕಂತೆ. ಅವ್ರ ಗಂಡನಿಗೆ ಬ್ಲಡ್ ಬ್ಯಾಂಕ್ ಎಲ್ಲಿ ಅಂತ ಗೊತ್ತಿಲ್ಲ. ನೀವು ಹೋಗಿ ಒಂದು ಉಪಕಾರ ಮಾಡಬಹುದಾ?’

‘ಅಲ್ಲ ಮಾರಾಯ್ತಿ... ಅವ್ರ ಮಗುವಿಗೆ ಬ್ಲಡ್ ಬೇಕೆಂದ್ರೆ ನನ್ನನ್ನು ನಿದ್ದೆಯಿಂದ ಎಬ್ಬಿಸಬೇಕೆಂದಿದೆಯಾ?’ ನಾನು ತುಸು ಕೋಪದಿಂದಲೇ ಕೇಳಿದೆ.

‘ನೀವು ಜೋರು ಮಾತನಾಡಬೇಡಿ ಪ್ಲೀಸ್. ಅವ್ರಿಗಾದ್ರೂ ಏನೂಂತ ಗೊತ್ತಿಲ್ಲ. ಗೊತ್ತಿದ್ದ ನಾವಾದ್ರೂ ಉಪಕಾರ ಮಾಡಿದ್ರೆ ಆ ಪುಣ್ಯಕ್ಕಾದರೂ ನಮ್ಮ ಮಗು ಚೇತರಿಸಿಕೊಂಡರೆ’ ಈಗ ನನ್ನವಳು ನನ್ನ ಭಾವನೆಗೆ ಇರಿದಿದ್ದಳು.

ನಾನು ಮಲಗಿದಲ್ಲಿಂದೆದ್ದು ಎದ್ದು ಸೊಳ್ಳೆಗಳ ಕಡಿದ ಗಾಯವನ್ನು ಉಜ್ಜಿಕೊಂಡು ಅವರಿದ್ದಲ್ಲಿಗೆ ಬಂದೆ. ಹಳೆಯ ಪಂಚೆ ಉಟ್ಟಿದ್ದ ಆ ಸಣಕಲು ಬಡವ ತಂದೆ, ಡಾಕ್ಟರ್ ಕೊಟ್ಟ ಚೀಟಿ ಹಿಡಿದುಕೊಂಡು ನಿಂತಿದ್ದ.

‘ದಯವಿಟ್ಟು ಒಂದು ಉಪಕಾರ ಮಾಡಿ’ ಆ ಹೆಂಗಸು ದಯನೀಯವಾಗಿ ಕೈ ಮುಗಿಯಿತು. ಅವರ ಕೈಯಿಂದ ಚೀಟಿ ಪಡೆದುಕೊಂಡು ಆ ಬಡವನನ್ನು ಕರೆದುಕೊಂಡು ಮಧ್ಯರಾತ್ರಿಯಲ್ಲೆದ್ದು ಬ್ಲಡ್ ಬ್ಯಾಂಕಿನೆಡೆಗೆ ನಡೆದೆ. ಆ ಹುಣ್ಣಿಮೆ ರಾತ್ರಿಯಲ್ಲಿ ಬ್ಲಡ್ ಬ್ಯಾಂಕಿನಲ್ಲಿ ರಕ್ತ ಸಿಗಲು ರಿಜಿಸ್ಟರ್ ಕೌಂಟರಿನಲ್ಲಿ ಪೇಶೆಂಟ್ ಹೆಸರನ್ನು ಕೊಟ್ಟು ಅವರು ಫೈಲ್ ಹುಡುಕಿ ತಂದೆಯ ಸಹಿ ಹಾಕಿ ಎರಡನೇ ಬ್ಲಾಕಿಗೆ ಹೋಗಿ ಕೌಂಟರಿನಲ್ಲಿ ನಿಂತು ರಕ್ತವನ್ನು ಪಡೆಯಬೇಕಾಗಿತ್ತು.

ಅವನು ನನ್ನ ಹಿಂದೆಯೇ ನಡೆದು ಬರುತ್ತಿದ್ದ. ಸಾರಾಯಿಯ ಅಸಹ್ಯ ವಾಸನೆ ಮೂಗಿಗೆ ಬಡಿಯುತ್ತಿತ್ತು. ಈ ಮಧ್ಯೆ ಆತನ ಮೊಬೈಲ್ ಅಪರಿಮಿತವಾಗಿ ಅರಚಿಕೊಳ್ಳುತ್ತಿತ್ತು. ‘ಫೋನ್ ಎತ್ತಿಕೊಂಡು ಮಾತನಾಡ್ರೀ’ ನಾನು ಆ ರಾತ್ರಿಯಲ್ಲಿ ನಿದ್ದೆಗೆಟ್ಟ ಕೋಪ- ಈ ಅಸಹ್ಯ ವಾಸನೆ- ಆ ಕಿರಿಕಿರಿಯ ರಿಂಗು ಟೋನಿಗೂ ಸೇರಿಸಿ ಜೋರು ಮಾಡಿದೆ. ಅವನು ಫೋನೆತ್ತಿಕೊಂಡು ಧ್ವನಿ ತಗ್ಗಿಸಿ ಮಾತನಾಡತೊಡಗಿದ.

‘ಇರಿ ಫೋನ್ ಮಾಡ್ತೇನೆ ಧನಿ. ರಕ್ತ ತರಲು ಹೋಗ್ತಾ ಇದ್ದೇವೆ’ ಎಂದು ಹೇಳಿ ಏನೋ ರಹಸ್ಯ ಮಾತುಕತೆಯಂತೆ ಕರೆ ತುಂಡರಿಸಿದ.

ನನಗೇಕೋ ಸಂಶಯ ಬಂದು’ ನೀವು ಮಗುವಿಗೆ ಏನಾಗಬೇಕು?’ ಎಂದು ಕೇಳಿದೆ.

ಅವನು ‘ತಂದೆ ಸಾರ್’ ಅಂದ. ಅವನ ಸರಾಯಿಯ ವಾಸನೆ ಗುಮ್ಮೆಂದು ಮುಖಕ್ಕೆ ರಾಚಿತು. ‘ಇದ್ಯಾಕೆ ಈ ರಾತ್ರಿಯಲ್ಲೂ ಈ ಪಾಟಿ ಕುಡಿತೀರಾ?’

‘ನಿದ್ದೆ ಬರಬೇಕಲ್ಲ ಸ್ವಾಮಿ. ನಮ್ಮ ಕೆಲಸ ಹಾಗೆ... ಅಭ್ಯಾಸವಾಗಿದೆ’ ಅಂದ. ಅದಾಗಲೇ ಮತ್ತೆ ಫೋನ್ ರಿಂಗಾಯಿತು. ಅವನು ಆ ಕರೆ ಬಂದಿಲ್ಲವೆಂದೇ ನಟಿಸಲು ಪ್ರಯತ್ನಸುತ್ತಿದ್ದ.

ಅಷ್ಟರಲ್ಲಿ ನಾವಿಬ್ಬರೂ ರಿಜಿಸ್ಟರ್ ಆಫೀಸಿನಲ್ಲಿ ಡಾಕ್ಟರ್ ಚೀಟಿ ಕೊಟ್ಟು ಕಾಯುತ್ತಿದ್ದೆವು. ಅವನು ಫೋನೆತ್ತಿಕೊಂಡು ಎಲ್ಲಿಗೋ ಹೋಗಿ ಮಾತನಾಡಿ ಬಂದ.

ನನಗೆ ಕುತೂಹಲವನ್ನು ಹಿಡಿದಿಡಲು ಸಾಲಲಿಲ್ಲ. ‘ಯಾರದು ಈ ಮಧ್ಯರಾತ್ರಿಯಲ್ಲಿ ಫೋನ್’ ಎಂದು ಕೇಳಿದೆ.

‘ಅದು... ಅದು... ಪಂಚಾಯತ್ ಮೆಂಬರ್ ಸಾರ್... ಕೇಸ್ ಆಗಿದೆಯಲ್ಲ’ ಅಂದ.

‘ಹೋ.. ಅದಕ್ಕೆ ಈ ರಾತ್ರಿಯಲ್ಲಿ ಅಂತಹ ಫೋನ್ ಮಾಡುವ ಅವಶ್ಯಕತೆ ಏನಿತ್ತು?’ ಸಹಜ ಕುತೂಹಲದಿಂದಲೇ ಕೇಳಿದೆ.

‘ಆ ಕೇಸು ಹಿಂಪಡೆಯಬೇಕೆಂದು